Existing user? Sign In ▾ (https://ecisveep.nic.in/login/) Sign Up (https://ecisveep.nic.in/register/)

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/ಶೈವಿ/130/ಚುಪ್ರ/2018-19

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ: 7.03.2019

# ಸುತ್ತೋಲೆ

**ವಿಷಯ:** ರಾಜ್ಯದ ಎಲ್ಲಾ ಪದವಿ ಕಾಲೇಜುಗಳ ಇಎಲ್‌ಸಿ ಸಂಚಾಲಕರಿಗೆ ತರಬೇತಿ ಕಾರ್ಯಕ್ರಮ.

**ಉಲ್ಲೇಖ:** ಮುಖ್ಯ ಚುನಾವಣಾಧಿಕಾರಿಗಳು ಸುತ್ತೋಲೆ ಸಂಖ್ಯೆ: ಸಿಆಸುಇ/111/ಚುಮುಪ/ಅಮುಚುಅ-1/2018ರ ದಿನಾಂಕ: 27.02.2019.

**********

ಭಾರತದ ಚುನಾವಣಾ ಆಯೋಗವು ಭಾವೀ ಮತದಾರರಾದ ಇಂದಿನ ವಿದ್ಯಾರ್ಥಿಗಳಲ್ಲಿ ಚುನಾವಣಾ ಪ್ರಕ್ರಿಯೆಯ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ರಾಜ್ಯದ ಎಲ್ಲಾ ಪದವಿ ಕಾಲೇಜುಗಳಲ್ಲಿ 'ಚುನಾವಣಾ ಸಾಕ್ಷರತಾ ಕ್ಲಬ್' (Electoral Literacy Club) ಗಳನ್ನು ಸ್ಥಾಪಿಸಿ ಕಾಲೇಜಿನ ಸಕ್ರಿಯ ಅಧ್ಯಾಪಕರನ್ನು ಸಂಚಾಲಕರನ್ನಾಗಿ ನೇಮಸಿ ಅರ್ಹ ವಿದ್ಯಾರ್ಥಿಗಳಲ್ಲಿ ಮತದಾನದ ಬಗ್ಗೆ ಅರಿವು ಮೂಡಿಸಲು ವಿವಿಧ ಕಾರ್ಯಕ್ರಮವನ್ನು ಆಯೋಜಿಸಲು ಈಗಾಗಲೇ ಸೂಚಿಸಲಾಗಿತ್ತು.

ಮುಂದುವರೆದು ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳ ಇಎಲ್‌ಸಿ ಸಂಚಾಲಕರು ಈ ಕೆಳಕಂಡ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ ಅಗತ್ಯ ಕ್ರಮಕೈಗೊಳ್ಳಬೇಕಾಗಿರುತ್ತದೆ.

1. ಕಾಲೇಜುಗಳಲ್ಲಿ ಸ್ಥಾಪಿಸಿರುವ ಇಎಲ್‌ಸಿ(Electoral Literacy Club)ಗಳನ್ನು ಭಾರತೀಯ ಚುನಾವಣಾ ಆಯೋಗದ ವೆಬ್‌ಸೈಟ್‌ನಲ್ಲಿ ಅಗತ್ಯ ಮಾಹಿತಿಯೊಂದಿಗೆ ಕಡ್ಡಾಯವಾಗಿ ನೊಂದಾಯಿಸಬೇಕಾಗಿರುತ್ತದೆ.
   ನೊಂದಾಯಿಸಬೇಕಾದ ವಿಳಾಸ: https://ecisveep.nic.in/clubs/

   Register your School/Club
2. ದಿನಾಂಕ: 11.03.2019 ರಿಂದ 18.03.2019ರ ವರೆಗೆ ವಿವಿಧ ದಿನಾಂಕಗಳಂದು ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ನಡೆಯುವ 02 ದಿನಗಳ (6 ಅವಧಿಗಳು) ಇಎಲ್‌ಸಿ ಸಂಚಾಲಕರ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಕಡ್ಡಾಯವಾಗಿರುತ್ತದೆ.
3. ಕಾಲೇಜು ಶಿಕ್ಷಣ ಇಲಾಖೆಯ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಅರ್ಹ ಯುವ ವಿದ್ಯಾರ್ಥಿ ಮತದಾರರನ್ನು ಮತದಾರರ ಪಟ್ಟಿಗೆ ಸೇರಿಸುವುದು ಕಡ್ಡಾಯವಾಗಿರುತ್ತದೆ. ಹಾಗೂ ಈ ಸಂಬಂಧ Form-6 ಅನ್ನು BLO ಗಳಿಗೆ ಒಪ್ಪಿಸಿರುವ ಮಾಹಿತಿಯ Weekly Progress ಅನ್ನು ಕಾಲೇಜು ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ತಿಳಿಸಿರುವ ಗೂಗಲ್ ಫಾರ್ಮ್ ಮೂಲಕ ಪ್ರತಿ ಶನಿವಾರ ಅಪ್‌ಲೋಡ್ ಮಾಡಲು ಸೂಚಿಸಲಾಗಿದೆ.
4. ಈಗಾಗಲೇ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ನೊಂದಾಯಿಸಿರುವ ವಿದ್ಯಾರ್ಥಿಗಳನ್ನು ಚುನಾವಣಾ ಆಯೋಗದ App ಮೂಲಕ ಪರಿಶೀಲಿಸಿ ಖಚಿತಪಡಿಸಿಕೊಳ್ಳುವ ಬಗ್ಗೆ ಜಾಗೃತಿ ಮಾಡಿಸಲು ಸೂಚಿಸಲಾಗಿದೆ.

ಈ ಮೇಲ್ಕಂಡ ಕ್ರಮಗಳನ್ನು ಕೈಗೊಂಡ ಬಗ್ಗೆ dcekar.sports@gmail.com ಗೆ ವರದಿ ನೀಡಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ಕಾಲೇಜು ಶಿಕ್ಷಣ ಆಯುಕ್ತರು

**ಇವರಿಗೆ:**

ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳು, ಕಾನೂನು, ಬಿ.ಎಡ್. ಹಾಗೂ ಚಿತ್ರಕಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಅಗತ್ಯ ಕ್ರಮ ಕೈಗೊಂಡು ವಿವರಗಳನ್ನು ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗೆ ಸಲ್ಲಿಸುವುದು

ಮ.ತಿ.ನೋ.

Scanned by CamScanner

# Request For Creating A Club:

**Name of Institute :**

**Address**

**Pincode**

**State :**

Select State

**Select District :**

Select District

**Name of Requestee:**

**Email:**

**Phone:**

**Captcha**

22719

Submit

Home > (https://ecisveep.nic.in/) clubid_request (https://ecisveep.nic.in/report/clubid_request/) All Activity (https://ecisveep.nic.in/discover/)

**Important Information**

By using this site, you agree to our Terms of Use (https://ecisveep.nic.in/terms/) & Privacy Policy (https://ecisveep.nic.in/privacy/)

✔ I accept (https...



Scanned by CamScanner